# ಕರ್ನಾಟಕ ವಿಧಾನ ಪರಿಷತ್ತು

**ನಿಯಮ 330 ರಡಿಯಲ್ಲಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ವೈ.ಎ. ನಾರಾಯಣಸ್ವಾಮಿರವರು ಮಂಡಿಸಿರುವ ಸೂಚನೆಗೆ ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಪ್ರವಾಸೋದ್ಯಮ ಸಚಿವರ ಉತ್ತರ.**

---

**ವಿಷಯ: "ಬೆಂಗಳೂರು ನಗರದಲ್ಲಿ ಅಲ್ಪಸಂಖ್ಯಾತರ ಪ್ರಾರ್ಥನಾ ಮಂದಿರಗಳಲ್ಲಿ ಅಜಾನ್ ಕರೆಯಲು ಅತೀ ಹೆಚ್ಚಿನ ಶಬ್ದವುಳ್ಳ ಧ್ವನಿ ವರ್ಧಕಗಳನ್ನು ಬಳಸುತ್ತಿದ್ದು, ಈ ಶಬ್ದ ಮಾಲಿನ್ಯವನ್ನು ತಡೆಯಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವಿಫಲವಾಗಿರುವ ಬಗ್ಗೆ ಹಾಗೂ ಈ ಶಬ್ದ ಮಾಲಿನ್ಯದಿಂದ ಅಕ್ಕ-ಪಕ್ಕ ನಾಗರೀಕರ ಸ್ಥಿತಿ ದುಸ್ತರವಾಗುತ್ತಿರುವ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ."**

---

ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು, ಜಲ (ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯಿದೆ 1974 ಮತ್ತು (ವಾಯು ಮಾಲಿನ್ಯ ನಿಯಂತ್ರಣ ಮತ್ತು ನಿವಾರಣೆ) ಕಾಯಿದೆ 1981ರ ಅಡಿಯಲ್ಲಿ ಸ್ಥಾಪಿತವಾಗಿದ್ದು ಮಾಲಿನ್ಯ ನಿಯಂತ್ರಣ ಮಾಡುವ ಸಂಬಂಧ ಕಾನೂನುಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ

ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯವು ಪರಿಸರ (ಸಂರಕ್ಷಣಾ) ಕಾಯ್ದೆ, 1986 ರ ಅಡಿಯಲ್ಲಿ ಶಬ್ದ (ಮಾಲಿನ್ಯ ಮತ್ತು ನಿಯಂತ್ರಣ) ನಿಯಮಗಳು, 2000 ನ್ನು ಜಾರಿಗೆ ತಂದಿರುತ್ತದೆ. ಈ ನಿಯಮಗಳ, ನಿಯಮ 4ರಲ್ಲಿ ಶಬ್ದ ಮಾಲಿನ್ಯವನ್ನು ಜಾರಿಗೊಳಿಸಲು ನಾಲ್ಕು ವಿಭಾಗಗಳನ್ನಾಗಿ ಶಬ್ದಗಳ ನಿಯಂತ್ರಣವಿಡಲು ವಿಂಗಡಿಸಿದೆ. ಬೆಳಗ್ಗೆ ಮತ್ತು ರಾತ್ರಿಯ ವಾತಾವರಣ ಶಬ್ದದ ಪ್ರಮಾಣವನ್ನು ಈ ಕೆಳಕಂಡಂತೆ ನಿಗದಿಪಡಿಸುತ್ತದೆ.

| | | ಬೆಳಗ್ಗೆ dB(A) | ರಾತ್ರಿ dB(A) |
|---|---|---|---|
| 1. | ಕೈಗಾರಿಕಾ ಪ್ರದೇಶ | 75 | 70 |
| 2. | ವಾಣಿಜ್ಯ ಪ್ರದೇಶ | 65 | 55 |
| 3. | ವಸತಿ ಪ್ರದೇಶ | 55 | 45 |
| 4. | ನಿಶ್ಯಬ್ದ ವಲಯ (Silent Zone) | 50 | 40 |

<u>ಬೆಳಗಿನ ಸಮಯ</u>- 6 AM ರಿಂದ 10 PM ಗಂಟೆಯವರೆಗೆ

<u>ರಾತ್ರಿ ಸಮಯ</u> - 10 PM ಗಂಟೆಯಿಂದ ಬೆಳಗ್ಗೆ 6 AM ರವರೆಗೆ

ಶಬ್ದ (ನಿಯಂತ್ರಣ ಮತ್ತು ನಿವಾರಣೆ) ನಿಯಮಗಳು, 2000 ನಿಯಮ 2(ಸಿ) ಅಡಿಯಲ್ಲಿ ವ್ಯಾಖ್ಯಾನಿಸಿದ ಪ್ರಾಧಿಕಾರವನ್ನು ಸ್ಥಾಪಿಸಲಾಗಿದ್ದು, ಜಿಲ್ಲೆಯ ಜಿಲ್ಲಾಧಿಕಾರಿಗಳು, ಪೋಲೀಸ್ ಆಯುಕ್ತರು ಹಾಗೂ ಡಿ.ವೈ.ಎಸ್.ಪಿಗೆ ಕಡಿಮೆ ಇರದ ಅಧಿಕಾರಿಗಳನ್ನು ಕಾನೂನು ಅನುಷ್ಠಾನಗೊಳಿಸುವ ಅಧಿಕಾರವನ್ನು ನೀಡಲಾಗಿದೆ. ರಾಜ್ಯ ಸರ್ಕಾರದ ದಿನಾಂಕ:18.09.2019 ರ ಆದೇಶದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಕಂದಾಯ ಇಲಾಖೆ ಹಾಗೂ ಡಿ.ವೈ.ಎಸ್.ಪಿಗೆ ಕಡಿಮೆ ಇರದ ಅಧಿಕಾರಿಗಳು ಪರಿಸರ (ಸಂರಕ್ಷಣೆ) ನಿಯಮಗಳು,1986 ರ ಸೆಕ್ಷನ್ 5 ರ ಅಡಿಯಲ್ಲಿ ಶಬ್ದ ಮಾಲಿನ್ಯ ಉಂಟು ಮಾಡುವವರ ವಿರುದ್ಧಕ್ರಮ ಜರುಗಿಸಲು ಆದೇಶಿಸಿದೆ.. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಉಪ ಪರಿಸರ ಅಧಿಕಾರಿ ಹಾಗೂ ಮೇಲ್ಪಟ್ಟ ಅಧಿಕಾರಿಗಳಿಗೆ ಸದರಿ ಆದೇಶದಂತೆ ಕ್ರಮ ಜರುಗಿಸಲು ಸಹ ಅಧಿಕಾರ ನೀಡಿದೆ.

....2

ಶಬ್ದ (ನಿಯಂತ್ರಣ ಮತ್ತು ನಿವಾರಣೆ) ನಿಯಮಗಳು, 2000 ನಿಯಮ 5 (1) ರಲ್ಲಿ ತಿಳಿಸಿರುವಂತೆ ಧ್ವನಿವರ್ಧಕಗಳನ್ನು ಅಳವಡಿಸುವ/ಉಪಯೋಗಿಸುವ ಮುಂಚೆ ಸಂಬಂಧಪಟ್ಟ ಪ್ರಾಧಿಕಾರದಿಂದ ಲಿಖಿತ ಅನುಮತಿಯನ್ನು ಪಡೆಯಬೇಕಾಗಿದ್ದು, ಧ್ವನಿವರ್ಧಕಗಳನ್ನು ರಾತ್ರಿ ವೇಳೆ (10pm – 6pm) ಉಪಯೋಗಿಸಲು ಪ್ರತಿಬಂಧಿಸಿದೆ.

ನಿಯಮ 5 (4)ರ ಅಡಿಯಲ್ಲಿ ಶಬ್ದ ಮಾಲಿನ್ಯವನ್ನು ಉಂಟು ಮಾಡುವ ಅಂದರೆ ವಾತಾವರಣದ ಶಬ್ದ (Ambient Noise) ಗಿಂತ 10 dB (A) ಹೆಚ್ಚಿದ್ದಲ್ಲಿ ಅಥವಾ 75 dB (A) ಇದ್ದಾಗ ಮಾತ್ರ ದೂರನ್ನು ದಾಖಲಿಸಬಹುದಾಗಿರುತ್ತದೆ.

ಶಬ್ದ (ನಿಯಂತ್ರಣ ಮತ್ತು ನಿವಾರಣೆ) ನಿಯಮಗಳು, 2000 ನಿಯಮ 4 (3) ಅಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಶಬ್ದದ ಗುಣಮಟ್ಟವನ್ನು ಮಾಪನ ಮಾಡುವ ಮತ್ತು ತಾಂತ್ರಿಕ ಅಂಕಿ ಅಂಶಗಳೊಂದಿಗೆ ಪ್ರಕಟಿಸಲು ಸೂಚಿಸಿರುತ್ತದೆ. ಈ ಅನ್ವಯ ಬೆಂಗಳೂರು ನಗರದಲ್ಲಿ ಒಟ್ಟು 10 ವಿವಿಧ ಪ್ರದೇಶಗಳಲ್ಲಿ ಶಬ್ದ ಮಾಲಿನ್ಯವನ್ನು ನಿರಂತರವಾಗಿ ಮಾಪನ ಮಾಡಿ ಸಾರ್ವಜನಿಕರಿಗೆ ಪ್ರಕಟಿಸಲಾಗುತ್ತಿದೆ. ಈ ಮಾಪನ ಮಾಡಿ ವರದಿಯನ್ನು ಮಂಡಳಿಯು ಮಂಡಳಿಯ ವೆಬ್‌ಸೈಟ್ www.kspcb.karnataka.gov.in ನಲ್ಲಿ ಪ್ರಕಟಿಸಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯು (ನಿಯಂತ್ರಣ ಮತ್ತು ನಿವಾರಣೆ) ಕಾಯಿದೆ, 1981 ಸೆಕ್ಷನ್ 31(A) ಮತ್ತು ವಾಯು (ನಿಯಂತ್ರಣ ಮತ್ತು ನಿವಾರಣೆ) 1981 ನಿಯಮ 20 (ಎ) ಅಡಿಯಲ್ಲಿ ದಿನಾಂಕ: 28/03/2014 ರಂದು ಬಿ.ಬಿ.ಎಂ.ಪಿ, ಪೋಲಿಸ್ ಇಲಾಖೆ ಹಾಗೂ ಸಾರಿಗೆ ಇಲಾಖೆಗಳಿಗೆ ಶಬ್ದ ಮಾಲಿನ್ಯ ನಿಯಂತ್ರಣ, ಧ್ವನಿವರ್ಧಕಗಳ ಬಳಕೆ ಕುರಿತಂತೆ ಸಮಗ್ರ ಆದೇಶ ಹೊರಡಿಸಿರುತ್ತದೆ. ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಛೇರಿಗಳು ಶಬ್ದ ಮಾಲಿನ್ಯ ಉಲ್ಲಂಘನೆ ಕಂಡುಬಂದ ಪ್ರಕರಣಗಳಲ್ಲಿ ಶಬ್ದ ಮಾಪನವನ್ನು ಮಾಡಿ ವರದಿಯನ್ನು ಸಂಬಂಧಿಸಿದ ಪೋಲೀಸ್ ಠಾಣೆಗೆ ಕಾನೂನು ಕ್ರಮ ಕೈಗೊಳ್ಳಲು ನೀಡುತ್ತವೆ.

ಮಾಲಿನ್ಯ ನಿಯಂತ್ರಣ ಮಂಡಳಿಯು 108 ಶಬ್ದ ಮಾಪನ ಉಪಕರಣಗಳನ್ನು ಸರಬರಾಜು ಮಾಡಿ ಪೋಲೀಸ್ ಇಲಾಖೆಗೆ ಈ ಬಗ್ಗೆ ದಿನಾಂಕ: 15.09.2020 ರಂದು ತರಬೇತಿ ನೀಡಿ ಶಬ್ದ ಮಾಲಿನ್ಯ ನಿಯಂತ್ರಣ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಂಡಿರುತ್ತದೆ.

ಮಾಲಿನ್ಯ ನಿಯಂತ್ರಣ ಮಂಡಳಿಯು ಸಾರ್ವಜನಿಕರ ದೂರಿನ ಅನ್ವಯ ಕ್ರಮ ತೆಗೆದುಕೊಳ್ಳಲು ಕಮಾಂಡ್ ಕಂಟ್ರೋಲ್ ರೂಮ್ ಅನ್ನು ಕೇಂದ್ರ ಕಚೇರಿಯಲ್ಲಿ ಸ್ಥಾಪಿಸಿದ್ದು ಮತ್ತು ಮಾಲಿನ್ಯ ನಿಯಂತ್ರಣ ಮಂಡಳಿಯು ಎಲ್ಲ ಜಿಲ್ಲೆಗಳ ಪರಿಸರ ಅಧಿಕಾರಿಗಳ ಕಛೇರಿಯಲ್ಲಿ ದೂರನ್ನು ಸ್ವೀಕರಿಸಿರುವುದನ್ನು ಪೋಲೀಸ್ ಇಲಾಖೆಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲು ಕ್ರಮ ವಹಿಸಲಾಗುತ್ತಿದೆ.

ಅಲ್ಪಸಂಖ್ಯಾತರ ಪ್ರಾರ್ಥನಾ ಮಂದಿರಗಳಲ್ಲಿ ಅಜಾನ್ ಕರೆಯಲು ಅತೀ ಹೆಚ್ಚಿನ ಶಬ್ದವುಳ್ಳ ಧ್ವನಿವರ್ಧಕಗಳನ್ನು ಬಳಸುತ್ತಿರುವ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ W.P. 51580/2020 ದಾಖಲಾಗಿದ್ದು, ಮಾಲಿನ್ಯ ನಿಯಂತ್ರಣ ಮಂಡಳಿಯು ಶಬ್ದ ಮಾಪನ ಮಾಡಿ ವಿವರವಾದ ವರದಿಯನ್ನು ಪೋಲಿಸ್ ಇಲಾಖೆಗೂ ಹಾಗೂ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಲಾಗಿದೆ ಹಾಗೂ ಮಾನ್ಯ ಅಡಿಷನಲ್ ಚೀಫ್ ಮೆಟ್ರೋಪಾಲಿಟಿನ್ ಮ್ಯಾಜಿಸ್ಟ್ರೇಟ್, ಬೆಂಗಳೂರು ಇಲ್ಲಿನ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗಿದೆ.

ಸಂಖ್ಯೆ: ಅಪಜೀ 246 ಇಪಿಸಿ 2020

Yogeshwar

**(ಸಿ. ಪಿ. ಯೋಗೇಶ್ವರ)**
**ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ**
**ಪ್ರವಾಸೋದ್ಯಮ ಸಚಿವರು.**